**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.140/2019**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ದ ಃಃ-

ಆರೋಪಿ ನಂ.1. ರಾಮು @ ರಮೇಶ ತಂದೆ ರಾಮುಲು ಮೇಕ್ಯಾನಿಕ
ವಃ 24 ವರ್ಷ, ಉಃ ಮೆಕ್ಯಾನಿಕ ಕೆಲಸ
ಸಾಃ ದೊಡ್ಡ ಅಗಸಿ ಸೇಡಂ .

2. ಸಿದ್ದು @ ಸಿದ್ದಪ್ಪಾ ತಂದೆ ಅಣ್ಣಾರಾವ ಬಿರಾದಾರ
ವಃ 23 ವರ್ಷ, ಉಃ ಒಕ್ಕಲುತನ,
ಸಾಃ ಬಿಬ್ಬಳ್ಳಿ ಗ್ರಾಮ , ತಾಃ ಸೇಡಂ

3. ಮಂಜುನಾಥ ತಂದೆ ಚನ್ನಪ್ಪಾ ಮೇತ್ರಿ
ವಃ 26 ವರ್ಷ, ಉಃ ಟ್ರಾಕ್ಟರ ಚಾಲಕ
ಸಾಃ ಸಟಪಟನಹಳ್ಳಿ ತಾಃ ಸೇಡಂ

4. ಅಣ್ಣಾರಾವ ತಂದೆ ವೀರಭದ್ರಪ್ಪಾ ಬಿರಾದಾರ
ವಃ 55 ವರ್ಷ, ಉಃ ಟ್ರಾಕ್ಟರ ಮಾಲಿಕ
ಸಾಃ ಬಿಬ್ಬಳ್ಳಿ ಗ್ರಾಮ, ತಾಃ ಸೇಡಂ

----

**ದೋಷಾರೋಪಣೆ**

ನಾನು **ಶ್ರೀ ಬಾಲು,** ಬಿಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 05-08-2018 ರಂದು ಬೆಳಿಗ್ಗೆ 11-50 ಗಂಟೆ ಸುಮಾರಿಗೆ ಸೇಡಂ ಪೋಲೀಸ ಠಾಣೆಯ ಹದ್ದಿಯಲ್ಲಿರುವ ಮುಗನೂರ ಗ್ರಾಮದ ಹತ್ತಿರ ಇರುವ ಕಾಗೀಣಾ ನದಿಯಲ್ಲಿ ಆರೋಪಿ.1 ರಿಂದ 4 ರವರು ಕೂಡಿ ತಮ್ಮ ಟ್ರಾಕ್ಟರ ನಂಬರ ಇರುವುದಿಲ್ಲ ಚೆಸ್ಸಿ ನಂ. MBNADAVGDHNH00309 ಹಾಗೂ ಇಂಜನ ನಂ.NHH4YBE0024 ಟ್ರಾಲಿ ನಂ. KA-32 T 7143 ನೇದ್ದರಲ್ಲಿ ಸರಕಾರಕ್ಕೆ ರಾಜ್ಯ ಧನವನ್ನು ಕಟ್ಟದೆ ಅಕ್ರಮವಾಗಿ ಕಳ್ಳತನದಿಂದ ನದಿಯಲ್ಲಿದ್ದ ಮರಳನ್ನು ತುಂಬುತ್ತಿದ್ದಾಗ ಚಾಸಾ.1 ನೆದ್ದವರು ಚಾಸಾ.2, 3 ನೆದ್ದವರ ಸಮಕ್ಷಮದಲ್ಲಿ ಧಾಳಿ ಮಾಡಿ ಹಿಡಿಯಲು ಹೋದಾಗ ಆರೋಪಿ.1 ರಿಂದ 4 ರವರು ಕೂಡಿ ಚಾಸಾ.1 ನೆದ್ದವನಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಮಗನೇ ನಿನು ಯಾರು ನಮ್ಮ ಟ್ರಾಕ್ಟರ ಹಿಡಿಯುವವನು ನೀನು ಎನು ಪೋಲೀಸ ಇದ್ದಿ ಎನು ಅಂತಾ ಜಗಳ ತೆಗೆದು ಸರಕಾರಿ ಕರ್ತವ್ಯಕ್ಕೆ ಅಡೆ ತಡೆ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 353 ಸಹ ಕಲಂ 34 ರ

ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು, ನಾಲ್ಕು ಜನರು ಸೇರಿ ಚಾಸಾ.1ನೇದ್ದವರಾದ ಪೋಲೀಸರಿಗೆ ಜಗಳ ತೆಗೆದು ಕೈಯಿಂದ ತಲೆಗೆ ಬೆನ್ನಿಗೆ ಎದೆಗೆ ಹಾಗೂ ಇತರಕಡೆ ಹೊಡೆದು ಸಾದಾ ಗಾಯ ಪಡಿಸಿ ಸರಕಾರಿ ಕರ್ತವ್ಯಕ್ಕೆ ಅಡೆ ತಡೆ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 332 ಸಹಕಲಂ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ , ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು, ಆರೋಪಿ.1 ರಿಂದ 4 ರವರು ಕೂಡಿ ಚಾಸಾ.1 ನೇದ್ದವರಿಗೆ ಬೋಸಡಿ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 504 ಸಹ ಕಲಂ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ನಾಲ್ಕನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ , ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು, ಆರೋಪಿತರು ಚಾಸಾ.1 ನೇದ್ದವರಿಗೆ ನೀನು ನಮ್ಮ ಟ್ರಾಕ್ಟರ ಹೇಗೆ ಹಿಡಿದುಕೊಂಡು ಹೋಗುತಿ ಹೋಗು ಮಗನೆ ನಿನಗೆ ಖಲಾಸ ಮಾಡುತ್ತೇವೆ ಅಂತಾ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 506 ಸಹ ಕಲಂ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ , ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು, ತಮ್ಮ ಟ್ರಾಕ್ಟರದಲ್ಲಿ ಸರಕಾರಕ್ಕೆ ರಾಜ್ಯ ಧನವನ್ನು ಕಟ್ಟದೆ ಅಕ್ರಮವಾಗಿ ಕಳ್ಳತನದಿಂದ ನದಿಯಲ್ಲಿದ್ದ ಮರಳನ್ನು ಸುಮಾರು 3-4 ಬುಟ್ಟಿಯಷ್ಟು ತುಂಬಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 379 ಸಹ ಕಲಂ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 22-12-2025 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.140/2019**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ದ ಃಃ-

ಆರೋಪಿ ಃ ರಾಮು @ ರಮೇಶ ತಂದೆ ರಾಮುಲು ಮೇಕ್ಯಾನಿಕ
ವಃ 24 ವರ್ಷ, ಉಃ ಮೆಕ್ಯಾನಿಕ ಕೆಲಸ
ಸಾಃ ದೊಡ್ಡ ಅಗಸಿ ಸೇಡಂ ಹಾಗೂ ಇತರರು

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ- ಆ-1

ಆ-2

ಆ-3

ಆ-4

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

ಆ-3

ಆ-4

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 22-12-2025 ಪ್ರ.ದ.ನ್ಯಾ.ದಂ. ಸೇಡಂ.